# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 237 |
| ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15.02.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ಹೊಸೂರು ಗ್ರಾಮದ ಸರ್ವೆ ನಂ.57 ಮತ್ತು ಸ.ನಂ.19 ಬಿ 3 ರಲ್ಲಿ 3 ಎಕರೆ ಭೂಮಿಯನ್ನು ತಹಶೀಲ್ದಾರ್ ಚನ್ನರಾಯಪಟ್ಟಣ ಇವರ ಆದೇಶ ಸಂಖ್ಯೆ: ಸಿ.ಆರ್.17/79-80, ದಿನಾಂಕ: 06.10.1979 ರಂದು ಯಾರ ಹೆಸರಿಗೆ ಮಂಜೂರು ಮಾಡಲಾಗಿದೆ; | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ಹೊಸೂರು ಗ್ರಾಮದ ಸರ್ವೆ ನಂ.57 ಮತ್ತು ಸ.ನಂ.19 ಬಿ 3 ರಲ್ಲಿ 3-00 ಎಕರೆ ಜಮೀನಿನ ಮಂಜೂರಿ ಆದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಮಂಜೂರಾತಿ ಆದೇಶವು ಲಭ್ಯವಿರುವುದಿಲ್ಲ. |
| (ಆ) | ಸದರಿ ಭೂಮಿಯು ಯಾರ ಅನುಭೋಗದಲ್ಲಿರುತ್ತದೆ; ಈ ಬಗ್ಗೆ ಸದರಿ ತಹಶೀಲ್ದಾರ್‌ರವರು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಜಮೀನಿನಲ್ಲಿ ಶ್ರೀ ಡಿ.ಕೆ.ಬೀರಪ್ಪ ಬಿನ್ ಕಾಳೇಗೌಡ, ಶ್ರೀಮತಿ ಗಂಗಮ್ಮ ಕೋಂ ನಂಜೇಗೌಡ ಮತ್ತು ಶ್ರೀಮತಿ ಎಂ.ಬಿ.ರುಕ್ಮಿಣಿ ಕೋಂ ಮಂಜೇಗೌಡ ಇರುವುದಾಗಿ ಭೂಮಾಪಕರ ವರದಿಯಂತೆ ತಿಳಿದು ಬಂದಿರುತ್ತದೆ. |
| (ಇ) | ತಹಶೀಲ್ದಾರ್‌ರವರು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿದ್ದರೂ ಸಹ ಅನುಭೋಗದಲ್ಲಿರುವ ವಾರಸುದಾರರಿಗೆ/ ಮಂಜೂರಾತಿದಾರರಿಗೆ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ ಚನ್ನರಾಯಪಟ್ಟಣ ರವರ ದಿನಾಂಕ: 22.12.2021ರ ತೀರ್ಪಿನಂತೆ ಅರ್ಜಿದಾರರಿಗೆ ಖಾತೆ ಮಾಡದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; | ಮಂಜೂರಿಯ ಮೂಲ ಕಡತವು ತಾಲ್ಲೂಕು ಕಛೇರಿಯಲ್ಲಿ ಲಭ್ಯವಿಲ್ಲದೇ ಇರುವುದರಿಂದ ನ್ಯಾಯಾಲಯದ ತೀರ್ಪಿನನುಸಾರ ಕ್ರಮವಹಿಸಲು ವಿಳಂಬವಾಗುತ್ತಿರುತ್ತದೆ ಎಂಬ ಮಾಹಿತಿಯನ್ನು ನ್ಯಾಯಾಲಯದ ಗಮನಕ್ಕೆ ತರಲಾಗಿದೆ. |
| (ಈ) | ಸದರಿ ಅರ್ಜಿದಾರರ ಹೆಸರಿಗೆ ಮೇಲ್ಕಂಡ ಭೂಮಿಯ ಸರ್ಕಾರದಿಂದ ದಿನಾಂಕ: 06.10.1979 ರಂದು ಮಂಜೂರಾದ ಭೂಮಿಯನ್ನು ಅರ್ಜಿದಾರನ ಹೆಸರಿಗೆ ಖಾತೆ ಮಾಡಲು ಮೂಲ ಕಡತವು ಕಚೇರಿಯ ಅಭಿಲೇಖಾಲಯ ಶಾಖೆಯಲ್ಲಿ ಕಂಡುಬರುವುದಿಲ್ಲವೆಂದು ಹಿಂಬರಹ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಉ) | ಅರ್ಜಿದಾರರ ಹೆಸರಿಗೆ ಖಾತೆ ಮಾಡುವ ಬಗೆಗಿನ ಮೂಲ ಕಡತವು ಕಚೇರಿಯ ಅಭಿಲೇಖಾಲಯ ಶಾಖೆಯಲ್ಲಿ ಕಂಡು ಬರದಿದ್ದಲ್ಲಿ; ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು? | ಮೂಲ ಕಡತ ಲಭ್ಯವಿಲ್ಲದೇ ಇರುವುದರಿಂದ ಯಾರ ಮೇಲೂ ಕ್ರಮವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

(ಕಡತ ಸಂಖ್ಯೆ:ಕಂಇ 10 ಎಲ್‌ಜಿಹೆಚ್ 2023)

(ಆರ್.ಅಶೋಕ)
ಕಂದಾಯ ಸಚಿವರು